# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ.</u>

## SC No. 66/2022

ಪಿರ್ಯಾದಿ : ಕರ್ನಾಟಕ ಸರ್ಕಾರ
ಅಮೀನಗಡ ಪೊಲೀಸ ಠಾಣೆ

ವಿರುದ್ಧ

ಆರೋಪಿ : ಮುತ್ತಪ್ಪ ಯಂಕಪ್ಪ ವಡ್ಡರ ಉರ್ಫ ಕಟ್ಟಿಮನಿ

ಆರೋಪಿ : ಮುತ್ತಪ್ಪ ಯಂಕಪ್ಪ ವಡ್ಡರ ಉರ್ಫ ಕಟ್ಟಿಮನಿ
ವಯಾಃ 40 ವರ್ಷ, ಉದ್ಯೋಗಃ ಕೂಲಿ
ವಿಳಾಸಃ ಹೂವಿನಹಳ್ಳಿ, ತಾಃ ಹುನಗುಂದ

## <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನವಯ ಆರೋಪಿಯ ಹೇಳಿಕೆ</u>

ಪ್ರಶ್ನೆ ನಂ.1 : ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿ ತಿಳಿದುಕೊಂಡಿದ್ದಿರಾ?

ಉತ್ತರ : ತಿಳಿದುಕೊಂಡಿದ್ದೇನೆ

ಪ್ರಶ್ನೆ ನಂ.2: ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಸುಮಾರು 18 ವರ್ಷಗಳ ಹಿಂದೆ ಆತನ ಮಗಳು ಸಾವಿತ್ರಿಯನ್ನು ಹೂವಿನಹಳ್ಳಿ ಆರೋಪಿತನಾ ನಿನಗೆ ಕೊಟ್ಟು ಮದುವೆ ಮಾಡಿಸಿದ್ದು, ಮದುವೆ ನಂತರ ನೀನು ಆತನ ಮಗಳ ಶೀಲದ ಬಗ್ಗೆ ಸಂಶಯಪಟ್ಟು ಆಗಾಗ ಆಕೆಗೆ ಹೊಡಿಬಡಿ ಮಾಡುತ್ತಿದ್ದೆ ಹಾಗೂ ಈ ವಿಷಯವನ್ನು ಸಾವಿತ್ರಿ ಮನೆಗೆ ಬಂದಾಗ ತಿಳಿಸಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?.

ಉತ್ತರ : ಸುಳ್ಳು

ಪ್ರಶ್ನೆ ನಂ.3 : ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಈ ವಿಚಾರ ತಿಳಿದು ಊರಿನ ಹಿರಿಯರಾದ ಚಾಸಾ-11/ಶಂಕ್ರೆಪ್ಪ ಮತ್ತು ಆರೋಪಿತನಾದ ನಿನ್ನ ಊರಿನ ಹಿರಿಯರಾದ ಕುರಿ ಎನ್ನುವವರನ್ನು ಕರೆದುಕೊಂಡು ನಿನಗೆ ಬುದ್ಧಿವಾದ ಹೇಳಿಸಿದರೂ ಸಹ ನೀನು ಆತನ ಮಗಳು ಸಾವಿತ್ರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಂದರೆ ಕೊಡುವದನ್ನು ಬಿಟ್ಟಿರಲಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ :ಸುಳ್ಳು

ಪ್ರಶ್ನೆ ನಂ.4 : ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಸುಮಾರು ಒಂದು ವರ್ಷ ಒಂದು ತಿಂಗಳ ಹಿಂದೆ ಸಂಜೆ ಸುಮಾರು 5-6 ಗಂಟೆ ಸಮಯದಲ್ಲಿ ಆತನ ಮಗ ಚಾಸಾ-5/ಮುತ್ತಪ್ಪ ಹಾಗೂ ಆತನ ಸ್ನೇಹಿತ ಚಾಸಾ-9/ಸುರೇಶ ಸಾವಿತ್ರಿ ಬಳಿ ಹೋಗಿ ಬರುವುದಾಗಿ ಹೇಳಿ ಹೋದಾಗ ದಾರಿಯಲ್ಲಿ ಮೂರು ಜನ ಹುಡುಗರು ಸಾವಿತ್ರಿಯನ್ನು ಆರೋಪಿತನಾದ ನೀನು ನಿನ್ನ ಹೊಲದಲ್ಲಿ ಹೊಡೆದು ಕೊಲೆ ಮಾಡಿರುತ್ತಿ ಎಂದು ತಿಳಿಸಿದ್ದಾರೆಂದು ಚಾಸಾ-5/ಮುತ್ತಪ್ಪ ಕರೆ ಮಾಡಿ ತಿಳಿಸಿರುತ್ತಾನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.5 : ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ವಿಚಾರ ತಿಳಿದು ಆತನು ಊರಿನ ಕೆಲವು ಗ್ರಾಮಸ್ಥರನ್ನು ಕರೆದುಕೊಂಡು ಹೂವಿನಹಳ್ಳಿ ಗ್ರಾಮದಲ್ಲಿರುವ ಆರೋಪಿತನಾದ ನಿನ್ನ ಹೊಲಕ್ಕೆ ಹೋಗಿ ನೋಡಿದಾಗ ಹೊಲದಲ್ಲಿ ಆತನ ಮಗಳು ಸಾವಿತ್ರಿ ಸತ್ತು ಬಿದ್ದಿದ್ದಳು ಮತ್ತು ಆಕೆಗೆ ಕತ್ತಿನ ಬಳಿ ತೀವ್ರವಾದ ಗಾಯವಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.6 : ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಸ್ಥಳದಲ್ಲಿದ್ದ ಮೂರು ಜನರು ಅವರು ಗ್ರಾಮ ಪಂಚಾಯತಿ ಬಳಿ ಕುಳಿತಿದ್ದಾರ ಆರೋಪಿತನಾದ ನೀನು ಅವರ ಬಳಿ ಬಂದು ನಿನ್ನ ಹೆಂಡತಿಯನ್ನು ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾರೆ ಹಾಗೂ ನಂತರ ಅಮೀನಗಡ ಪೊಲೀಸ ಠಾಣೆಯಲ್ಲಿ ದೂರನ್ನು ಚಾಸಾ-9 ರವರು ಕಡೆಯಿಂದ ಹೇಳಿ ಬರೆಯಿಸಿ ರಾತ್ರಿ 10 ಗಂಟೆಗೆ ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.7 : ಫ್ರಾಸಾ-1 ಹುಲಗಪ್ಪ ಪಾತ್ರೋಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಪೊಲೀಸರು ಘಟನೆ ನೆಡದ ಸ್ಥಳಕ್ಕೆ ಬಂದು ಸ್ಥಳದಲ್ಲಿ ಶವ ಪಂಚನಾಮೆಯನ್ನು ಜರುಗಿಸಿ, ಆತನ ಮಗಳ ಮೃತದೇಹವನ್ನು ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆಗೆ ಸಾಗಿಸಿರುತ್ತಾರೆ ಹಾಗೂ ನಂತರ ಸ್ಥಳದಲ್ಲಿ ರಕ್ತ ಕಲೆಯಾದ ಮಣ್ಣು ಮತ್ತು ಮಾದರಿ ಮಣ್ಣು, ರಕ್ತ ಹತ್ತಿದ ಹತ್ತಿ ಮತ್ತು ಮಾದರಿ ಹತ್ತಿಯನ್ನು ಮತ್ತು ಒಂದು ಟಾವೆಲ್ ಹಾಗೂ ಕೊಲೆ ಮಾಡಲು ಉಪಯೋಗಿಸಿದ ಬೆಡಗ ಜಪ್ತಿ ಪಡಿಸಿಕೊಂಡು ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿದ್ದು, ಮರುದಿನ ಸಾವಿತ್ರ ರವರ ಮೃತದೇಹವನ್ನು ಪಡೆದುಕೊಂಡು ಊರಿನಲ್ಲಿ ಮಣ್ಣು ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.8 : ಫ್ರಾಸಾ-2 ಪರಸಪ್ಪ ಗುಳೇದ ತನ್ನ ಸಾಕ್ಷ್ಯದಲ್ಲಿ ಈಗ ಸುಮಾರು ಒಂದು ವರ್ಷ ಒಂದು ತಿಂಗಳ ಹಿಂದೆ ಆರೋಪಿತನಾದ ನೀನು ನಿನ್ನ ಹೆಂಡತಿ ಸಾವಿತ್ರಿಯನ್ನು ಹೊಡೆದು ಕೊಲೆ ಮಾಡಿರುತ್ತಿ ಎಂದು ವಿಷಯ ತಿಳಿದು ಅವನು ಮತ್ತು

ಊರಿನ ಗ್ರಾಮಸ್ಥರು ಹೂವಿನಹಳ್ಳಿ ಗ್ರಾಮದ ನಿನ್ನ ಹೊಲಕ್ಕೆ ಹೋಗಿ ನೋಡಿದಾಗ, ಸಾವಿತ್ರಿ ಮೃತಪಟ್ಟು ಬಿದ್ದಿದ್ದಳು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.9 : ಫ್ರಾಸಾ-2 ಪರಸಪ್ಪ ಗುಳೇದ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ರಾತ್ರಿ ಸುಮಾರು 11 ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಸ್ಥಳದಲ್ಲಿ ಬಿದ್ದಿದ್ದ ಮೃತದೇಹವನ್ನು ಗಮನಿಸಿ, ಸ್ಥಳದಲ್ಲಿ ಶವ ಪಂಚನಾಮೆ ಜರುಗಿಸಿ, ಆತನ ಮತ್ತು ಚಾಸಾ-2/ಯಲ್ಲಾಲಿಂಗ ಮತ್ತು ಚಾಸಾ-4/ಬಸವ್ವ ರವರ ಸಹಿಗಳನ್ನು ಪಡೆದುಕೊಂಡಿದ್ದು, ಮೃತ ದೇಹವನ್ನು ನೋಡಿದಾಗ ಆಕೆಯ ಕತ್ತಿನ ಭಾಗದಲ್ಲಿ ತೀವ್ರವಾದ ಗಾಯವಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.10 : ಫ್ರಾಸಾ-2 ಪರಸಪ್ಪ ಗುಳೇದ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಶವ ಪಂಚನಾಮೆ ನಂತರ ಸಾವಿತ್ರಿಯ ಮೃತದೇಹವನ್ನು ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದು, ಶವ ಪಂಚನಾಮೆ ನಂತರ ಪೊಲೀಸರು ಘಟನಾ ಸ್ಥಳವನ್ನು ಪರಿಶೀಲಿಸಿ, ಅಲ್ಲಿ ರಕ್ತ ಹತ್ತಿದ ಮಣ್ಣು, ಮಾದರಿ ಮಣ್ಣು, ರಕ್ತ ಹತ್ತಿದ ಹತ್ತಿ ಮತ್ತು ಮಾದರಿ ಹತ್ತಿ, ಒಂದು ಟಾವೆಲ್ ಹಾಗೂ ಒಂದು ಬೆಡಗವನ್ನು ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.11 : ಫ್ರಾಸಾ-2 ಪರಸಪ್ಪ ಗುಳೇದ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಮರುದಿನ ಪೊಲೀಸರು ಮತ್ತೊಮ್ಮೆ ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ಸುಮಾರು 4

ಗಂಟೆಗೆ ಠಾಣೆಗೆ ಭೇಟಿ ನೀಡಿದಾಗ ಠಾಣೆಯಲ್ಲಿ ಮೃತ ಸಾವಿತ್ರಿ ಕೊಲೆಯಾದ ಸಮಯದಲ್ಲಿ ಧರಿಸಿದ್ದ, ಒಂದು ಸೀರೆ, ಜಂಪರ್, ಲಂಗ, ಅಂಡರವೇರ್ ಹಾಗೂ ಒಂದು ಹಗ್ಗವನ್ನು ಆತನ ಮತ್ತು ಚಾಸಾ-2 ರವರ ಸಮಕ್ಷಮ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.12 : ಫ್ರಾಸಾ-3 ಮುತ್ತಪ್ಪ ಪಾತ್ರೂಟ ತನ್ನ ಸಾಕ್ಷ್ಯದಲ್ಲಿ ಸುಮಾರು 16 ವರ್ಷಗಳ ಹಿಂದೆ ಆತನ ಅಕ್ಕ ಸಾವಿತ್ರಿಯನ್ನು ಆರೋಪಿತನಾದ ನಿನಗೆ ಕೊಟ್ಟು ಮದುವೆ ಮಾಡಿದ್ದು, ಆರೋಪಿತನಾದ ನೀನು ಆತನ ಅಕ್ಕಳ ಮೇಲೆ ಸಂಶಯ ಪಟ್ಟು ಹೊಡಿ ಬಡಿ ಮಾಡಿ ಕಿರುಕುಳ ಕೊಡುತ್ತಿದ್ದೆ ಸದರಿ ವಿಚಾರ ತಿಳಿದು ಆತನ ತಂದೆ ಹುಲಗಪ್ಪ ಮತ್ತು ಊರಿನ ಹಿರಿಯರಾದ ಚಾಸಾ-11/ಶಂಕ್ರಪ್ಪ, ಚಾಸಾ-12/ಅಶೋಕ ರವರುಗಳು ನಿನ್ನ ಊರಾದ ಹೂವಿನಹಳ್ಳಿಗೆ ಭೇಟಿ ನೀಡಿ ಅಲ್ಲಿಯ ಹಿರಿಯರಾದ ಚಾಸಾ-10 ಮುತ್ತಣ್ಣ ರವರನ್ನು ಸೇರಿಸಿ ಪಂಚಾಯತಿ ಮಾಡಿ ನಿನಗೆ ಬುದ್ದಿವಾದ ಹೇಳಿದ್ದರು, ಆದರೂ ಸಹ ನೀನು ಸುಧಾರಿಸಲಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.13: ಫ್ರಾಸಾ-3 ಮುತ್ತಪ್ಪ ಪಾತ್ರೂಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಈಗ ಅಂದಾಜು 1 ವರ್ಷ 3 ತಿಂಗಳ ಹಿಂದೆ ಆತನ ಅಕ್ಕ ಸಾವಿತ್ರಿಯನ್ನು ಭೇಟಿಯಾಗಬೇಕೆಂದು ಚಾಸಾ-9 ರವರೊಂದಿಗೆ ಸಂಜೆ 6-30 ಗಂಟೆಗೆ ಹೋದಾಗ ಪಂಚಾಯತಿ ಕಚೇರಿ ಹತ್ತಿರ ಜನರ ಗುಂಪು ಅವರಲ್ಲಿ ಮುತ್ತಪ್ಪ, ವಿಠ್ಠಲ ಮತ್ತು ಹನಮಂತ ರವರು ಸಂಜೆ ಸುಮಾರು 4-30 ಗಂಟೆಗೆ ಆತನ ಅಕ್ಕ ಸಾವಿತ್ರಿ ಹಾಗೂ ನೀನು ಆಡು ಮತ್ತು ಆಕಳು ಹಿಡಿದುಕೊಂಡು ಹೊಲದ ಕಡೆ ಹೋಗಿದ್ದು, ನಂತರ 5-30 ಗಂಟೆಗೆ ಆರೋಪಿತನಾದ ನೀನು ಒಬ್ಬನೇ ಬಂದು

ನಿನ್ನ ಹೆಂಡತಿ ಕೆಟ್ಟ ಕೆಲಸ ಮಾಡಿದ್ದಳು ಆದ್ದರಿಂದ ಆಕೆಯನ್ನು ಹೊಲದಲ್ಲಿ ಸಾಯಿಸಿದ್ದೇನೆ ಅಂತಾ ಹೇಳಿ ಹೋದ ಬಗ್ಗೆ ಆತನಿಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.14: ಫ್ರಾಸಾ-3 ಮುತ್ತಪ್ಪ ಪಾತ್ರೂಟ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ನಂತರ ವಿಚಾರ ತಿಳಿದು ಆರೋಪಿತನಾದ ನಿನ್ನ ಹೊಲಕ್ಕೆ ಭೇಟಿ ನೀಡಿದಾಗ ನನ್ನ ಅಕ್ಕನ ಕುತ್ತಿಗೆಗೆ ಹಗ್ಗ ಬಿಗಿದಿದ್ದು ಆಕೆಯ ಕತ್ತಿನ ಬಳಿ ಗಾಯ ಆಗಿತ್ತು ಮತ್ತು ಆಕೆಯು ಮೃತ ಪಟ್ಟಿದ್ದಳು, ಸದರಿ ಸ್ಥಳದ ಪಕ್ಕದಲ್ಲಿ ಟಾವೇಲ್ ಮತ್ತು ಬೆಡಗ ಬಿದ್ದಿತ್ತು, ನಂತರ ಚಾಸಾ-1 ರವರಿಗೆ ಪೋನ ಮಾಡಿ ನಡೆದ ಘಟನೆ ಬಗ್ಗೆ ತಿಳಿಸಿದ್ದು, ಆಗ ಚಾಸಾ-1 ರವರು ಊರಿನ ಹಿರಿಯರ ಜೊತೆ ಘಟನಾ ಜಾಗದ ಹತ್ತಿರ ಬಂದಿರುತ್ತಾರೆ ಹಾಗೂ ಚಾಸಾ-1 ರವರು ಆರೋಪಿತನಾದ ನಿನ್ನ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.15: ಫ್ರಾಸಾ-4 ಸುರೇಶ ಕುರಿ ತನ್ನ ಸಾಕ್ಷ್ಯದಲ್ಲಿ ಸುಮಾರು ಈಗ ಅಂದಾಜು 1 ವರ್ಷ 3 ತಿಂಗಳ ಹಿಂದೆ ಆತನು ಮತ್ತು ಚಾಸಾ-5 ರವರು ಕೂಡಿಕೊಂಡು ಬೈಕ ಮೇಲೆ ಆರೋಪಿತನಾದ ನಿನ್ನ ಊರಾದ ಹೂವಿನ ಹಳ್ಳಿ ಗ್ರಾಮಕ್ಕೆ ಸಂಜೆ ಸುಮಾರು 6-30 ಗಂಟೆಗೆ ಭೇಟಿ ನೀಡಿದಾಗ ಊರಿನ ಪಂಚಾಯತಿ ಕಚೇರಿ ಬಳಿ ಜನರ ಗುಂಪು ಸೇರಿತ್ತು, ಅಲ್ಲಿ ಚಾಸಾ-5 ರವರಿಗೆ ಪರಿಚಯಸ್ಥರಾದ ಮೂರು ಜನ ಚಾಸಾ-5 ರವರನ್ನು ಮಾತನಾಡಿಸಿ ಸಂಜೆ ಸುಮಾರು 4-30 ಗಂಟೆಗೆ ಚಾಸಾ-5 ರವರ ಅಕ್ಕ ಮತ್ತು ಆರೋಪಿತನಾದ ನೀನು ಹೊಲದ ಕಡೆ ಹೋಗಿದ್ದು ಮತ್ತು ಸಂಜೆ 5-30 ಗಂಟೆಗೆ ಆರೋಪಿತನಾದ ನೀನು ಒಬ್ಬನೇ ವಾಪಸ್ಸು ಬಂದು ಪಂಚಾಯತಿ ಕಚೇರಿ ಬಳಿ ನಿನ್ನ ಹೆಂಡತಿಯನ್ನು ಕೊಲೆ ಮಾಡಿರುತ್ತಿ ಎಂದು

ಹೇಳಿ ಹೋಗಿರುತ್ತಿ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.16 : ಪ್ರಾಸಾ-4 ಸುರೇಶ ಕುರಿ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ವಿಷಯ ತಿಳಿದು ಘಟನಾ ಜಾಗಕ್ಕೆ ಭೇಟಿ ನೀಡಿದಾಗ ಚಾಸಾ-5 ರವರ ಅಕ್ಕ ಸಾವಿತ್ರಿರವರ ಕತ್ತಿಗೆಗೆ ಹಗ್ಗ ಬಿಗಿದಿದ್ದು ಮೃತಪಟ್ಟಿದ್ದರು, ಪಕ್ಕದಲ್ಲಿ ಟಾವೇಲ ಮತ್ತು ಬೆಡಗ ಬಿದ್ದಿತ್ತು, ನಂತರ ಚಾಸಾ-5 ರವರು ಅವರ ತಂದೆ ಚಾಸಾ-1 ರವರಿಗೆ ಪೋನ ಮಾಡಿ ವಿಷಯ ತಿಳಿಸಿದಾಗ ಚಾಸಾ-1 ಮತ್ತು ಊರಿನ ಹಿರಿಯರ ಘಟನಾ ಜಾಗಕ್ಕೆ ಬಂದು ಅಲ್ಲಿಂದ ಆತನು ಮತ್ತು ಚಾಸಾ-1 ರವರು ಅಮೀನಗಡ ಪೊಲೀಸ ಠಾಣೆಗೆ ಭೇಟಿ ನೀಡಿ ಚಾಸಾ-1 ರವರು ಹೇಳಿದಂತೆ ದೂರನ್ನು ಬರೆದಿರುತ್ತೇನೆ ಹಾಗೂ ನಂತರ ಚಾಸಾ-1 ರವರು ಸದರಿ ದೂರನ್ನು ಪೋಲೀಸರಿಗೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.17 : ಪ್ರಾಸಾ-12 ಡಾ. ಶ್ರೀಕಾಂತ ಮಾಳಿ ವೈಧ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ದಿಃ 16.06.2022 ರಂದು ಸಿಪಿಐ ಹುನಗುಂದ ರವರು ಮನವಿ ಸಲ್ಲಿಸಿ ಮೃತ ಸಾವಿತ್ರಿ ಗಂಡ ಮುತ್ತಪ್ಪ ವಡ್ಡ್ರ ಉರ್ಫ ಕಟ್ಟಿಮನಿ ರವರ ಮೃತದೇಹದ ಮೇಲೆ ಮರಣೋತ್ತರ ಪರೀಕ್ಷೆ ನಡೆಸಲು ಕೋರಿದ್ದು, ಅದರಂತೆ ಮಧ್ಯಾಹ್ನ 12-45 ರಿಂದ 2-00 ಗಂಟೆಯವರೆಗೆ ಮರಣೋತ್ತರ ಪರೀಕ್ಷೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.18 : ಪ್ರಾಸಾ-12 ಡಾ. ಶ್ರೀಕಾಂತ ಮಾಳಿ ವೈಧ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮರಣೋತ್ತರ ಪರೀಕ್ಷೆಯಲ್ಲಿ ಮೃತಳು 32 ವರ್ಷದವಳಿದ್ದು,

ಸದೃಡವಿದ್ದು, ಸೂಪ್ತವಾಗಿ ಮಲಗಿದ ಸ್ಥಿತಿಯಲ್ಲಿತ್ತು ಹಾಗೂ ಮೈಬಣ್ಣ ಕಪ್ಪಾಗಿತ್ತು, ದೇಹದ ಮೇಲೆ ಒಣಗಿದ ರಕ್ತದ ಕಲೆಗಳು ಹಾಗೂ ಬಾಯಿಯಲ್ಲಿ ರಕ್ತಸ್ರಾವ ಹಾಗೂ ಒಣಗಿದ ರಕ್ತದ ಕಲೆಗಳು ಕಂಡುಬಂದವು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.19: ಫ್ರಾಸಾ-12 ಡಾ. ಶ್ರೀಕಾಂತ ಮಾಳಿ ವೈಧ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ಮೃತಳಿಗೆ ಕುತ್ತಿಗೆ ಮೇಲೆ ಲೆಗೆಚರ್ ಮಾರ್ಕ ಇರುವದು ಕಂಡುಬಂದಿತು ಗಂಟಲಿನವರೆಗೆ ಇರಿಯಲಾಗಿತ್ತು ಮತ್ತು ಕತ್ತನ್ನು ಸಂಪೂರ್ಣವಾಗಿ ಸುತ್ತುವರೆದಿತ್ತು ಹಾಗೂ ಗಲ್ಲದಿಂದ ಕೆಳಗೆ ಕುತ್ತಿಗೆಯ ಎಡಭಾಗದಲ್ಲಿ ಹಾಗೂ ಮಧ್ಯಭಾಗದಲ್ಲಿ ಕೊಚ್ಚಿದ ಗಾಯಗಳು ಕಂಡುಬಂದಿರುತ್ತವೆ ಹಾಗೂ ಸದರಿ ಗಾಯಗಳು ಚೂಪಾದ ಮತ್ತು ಭಾರವಾದ ಆಯುಧದಿಂದ ಹೊಡೆದಲ್ಲಿ ಆಗಬಹುದು ಹಾಗೂ ಮರಣೋತ್ತರ ಪರೀಕ್ಷೆ ಪೂರ್ಣವದಲ್ಲಿ ಆದಂತಹ ಗಾಯಗಳು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.20: ಫ್ರಾಸಾ-12 ಡಾ. ಶ್ರೀಕಾಂತ ಮಾಳಿ ವೈಧ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷೆಯಿಂದ ಮೃತಳ ಸಾವು ಕತ್ತನ್ನು ಹಿಸುಕಿ ಉಸಿರುಗಟ್ಟುವಿಕೆಯಿಂದ ಹಾಗೂ ಕತ್ತಿಗೆ ಆದ ಮಾರಣಾಂತಿಕ ಗಾಯಗಳಿಂದ ಆಗಿರಬಹುದು ಎಂದು ಈ ಬಗ್ಗೆ ಮರಣೋತ್ತರ ವರದಿ ನೀಡಿರುತ್ತೇನೆ ಹಾಗೂ ಮರಣೋತ್ತರ ಪರೀಕ್ಷೆ ಕಾಲಕ್ಕೆ ಡಾ. ಶಿವಾನಂದ ರವರು ಹಾಜರಿದ್ದರು ಹಾಗೂ ಮೃತಳ ರಕ್ತದ ಗುಂಪು ಪರೀಕ್ಷೆಗಾಗಿ 5 ಎಂ.ಎಲ್ ರಕ್ತವನ್ನು ನ್ನು ಸಂಗ್ರಹಿಸಿದ್ದು, ಪರೀಕ್ಷೆಯಿಂದ ಮೃತಳ ರಕ್ತದ ಗುಂಪು ಎಬಿ ನೆಗೆಟಿವ್ ಇರುತ್ತದೆ ಎಂದು ನುಡಿದಿರುತ್ತಾರೆ ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.21: ಫ್ರಾಸಾ-12 ಡಾ. ಶ್ರೀಕಾಂತ ಮಾಳಿ ವೈಧ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ದಿಃ 29.05.2023 ರಂದು ತನಿಖಾಧಿಕಾರಿ ಮನಳಿಯೊಂದಿಗೆ ಒಂದು ಸಲಾಕೆ ಮತ್ತು ಹಗ್ಗವನ್ನು ಕಳುಹಿಸಿ ಅವುಗಳಿಂದ ಹಲ್ಲೆ ಮಾಡಿದಲ್ಲಿ ಮೃತಳಿಗೆ ಆದಂತಹ ಗಾಯಗಳು ಆಗಬಹುದೆ ಎಂದು ಅಭಿಪ್ರಾಯ ಕೋರಿದ್ದು, ಸದರಿ ವಸ್ತುಗಳನ್ನು ಪರೀಶಿಲಿಸಿ ಸದರಿ ವಸ್ತುಗಳಿಂದ ಹೊಡೆದಲ್ಲಿ ಮರಣೋತ್ತರ ಪರೀಕ್ಷೆಯಲ್ಲಿ ನಮೂದು ಮಾಡಿದ ಗಾಯಗಳು ಎಂದು ಅಭಿಪ್ರಾಯ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.22: ಫ್ರಾಸಾ-13 ಶಂಕ್ರಪ್ಪ ಪಾತ್ರೋಟಿ ತನ್ನ ಸಾಕ್ಷ್ಯದಲ್ಲಿ ಆರೋಪಿತನಾದ ನಿನ್ನ ಮತ್ತು ಮೃತ ಸಾವಿತ್ರಿ ರವರ ಮದುವೆ ಸುಮಾರು 15-16 ವರ್ಷಗಳ ಹಿಂದೆ ನಡೆದಿದ್ದು, ಮದುವೆ ನಂತರ ನೀನು ನಿನ್ನ ಹೆಂಡತಿ ಸಾವಿತ್ರಿಗೆ ಅನೈತಿಕ ಸಂಬಂಧ ಇರುತ್ತದೆ ಎಂದು ಆಗಾಗ ಕಿರುಕುಳ ಕೊಟ್ಟು ಹಿಂಸೆ ಕೊಡುತ್ತಿದ್ದೆ, ಸದರಿ ವಿಚಾರ ತಿಳಿದು ಆತ, ಚಾಸಾ-1, ಚಾಸಾ-12/ಅಶೋಕ ಹಾಗೂ ನಿನ್ನ ಊರಿನ ಚಾಸಾ-10/ಮುತ್ತಣ್ಣ ರವರು ನಿನಗೆ ಸುಮಾರು 2-3 ಬಾರಿ ಬುದ್ಧಿವಾದ ಹೇಳಿದ್ದು, ಆದರೂ ಸಹ ನೀನು ಸಾವಿತ್ರಿ ಮೇಲೆ ಸಂಶಯ ಪಡುವದು ಬಿಡಲಿಲ್ಲ ಮತ್ತು ಆಕೆಗೆ ಹಿಂಸೆ ಕೊಡುತ್ತಿದ್ದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.23: ಫ್ರಾಸಾ-13 ಶಂಕ್ರಪ್ಪ ಪಾತ್ರೋಟಿ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಅಂದಾಜು ಈಗ ಒಂದುವರೆ ವರ್ಷದ ಹಿಂದೆ ಆತ ಮತ್ತು ಚಾಸಾ-12 ರವರು ಸಂಜೆ 7-30 ಗಂಟೆ ಸುಮಾರಿಗೆ ಬಸ್ ನಿಲ್ದಾಣದ ಬಳಿ ನಿಂತಿದ್ದಾಗ ಚಾಸಾ-1 ರವರು ಬಂದು ಆರೋಪಿತನಾದ ನೀನು ನಿನ್ನ ಹೆಂಡತಿಯನ್ನು ಹೊಡೆದು ಸಾಯಿಸಿರುತ್ತಿ ಎಂದು ತಿಳಿಸಿ ಜೊತೆಯಲ್ಲಿ ಬರಲು ಕೇಳಿದ್ದು, ನಂತರ ಎಲ್ಲರೂ ಸ್ಥಳಕ್ಕೆ ಹೋಗಿ

ನೋಡಿದಾಗ ಸಾವಿತ್ರಿ ಸತ್ತು ಬಿದ್ದಿದ್ದು ಆಕೆಯ ಕತ್ತಿನಲ್ಲಿ ಕತ್ತರಿಸಿದ ಗಾಯ ಹಾಗೂ ಕತ್ತಿನಲ್ಲಿ ಒಂದು ಹಗ್ಗ ಇರುವದು ಹಾಗೂ ಪಕ್ಕದಲ್ಲಿ ಒಂದು ಬೆಡಗು ಬಿದ್ದಿರುವದು ಕಂಡುಬಂದಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.24: ಫ್ರಾಸಾ-13 ಶಂಕ್ರಪ್ಪ ಪಾತ್ರೋಟಿ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಊರಿನ ಪಂಚಾಯತಿ ಕಚೇರಿ ಹತ್ತಿರ ಬಂದು ವಿಚಾರ ಮಾಡಲಾಗಿ ಆರೋಪಿತನಾದ ನೀನು ಸಂಜೆ 4 ಗಂಟೆ ಸುಮಾರಿಗೆ ನಿನ್ನ ಹೆಂಡತಿಯೊಂದಿಗೆ ಹೊಲಕ್ಕೆ ಹೋಗುವುದನ್ನು ಮತ್ತು ಸಂಜೆ 5 ಗಂಟೆಗೆ ಒಬ್ಬನೆ ವಾಪಸ್ಸು ಬಂದು, ಊರಿನವರ ಮುಂದೆ "ನನ್ನ ಹೆಂಡತಿ ಹೊಲಸ ಕೆಲಸ ಮಾಡಿದ್ದರಿಂದ ಆಕೆಯನ್ನು ಕಡಿದು ಬಂದಿರುತ್ತೇನೆ " ಎಂದು ಹೇಳಿದ ವಿಚಾರವನ್ನು ಅವರಿಗೆ ತಿಳಿಸಿರುತ್ತಾರೆ ಹಾಗೂ ಚಾಸಾ-1 ರವರು ಈ ಕುರಿತು ಆರೋಪಿತನಾದ ನಿನ್ನ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.25: ಫ್ರಾಸಾ-14 ಆನಂದ ಭಗವತಿ ಎ.ಎಸ್.ಐ ತನ್ನ ಸಾಕ್ಷ್ಯದಲ್ಲಿ ದಿಃ 16.06.2022 ರಂದು ಚಾಸಾ-35/ಸಿಪಿಐ ರವರು ಆತನನ್ನು ಮತ್ತು ಚಾಸಾ-25 ರವರನ್ನು ಆರೋಪಿತನಾದ ನಿನ್ನ ಪತ್ತೆಗಾಗಿ ನೇಮಕ ಮಾಡಿ ಜ್ಞಾಪನ ಪತ್ರ ನೀಡಿದ್ದು ಅದರಂತೆ ನಿನ್ನನ್ನು ಕಮತಗಿ ಬಸ್ ನಿಲ್ದಾಣದ ಹತ್ತಿರ ಹಿಡಿದು ವಶಕ್ಕೆ ಪಡೆದು ಅದೇ ದಿನ ಬೆಳಿಗ್ಗೆ 10-30 ಗಂಟೆಗೆ ವರದಿಯೊಂದಿಗೆ ಚಾಸಾ-35/ಸಿಪಿಐ ರವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.26: ಫ್ರಾಸಾ-15 ಮಹೇಶ ಹೊನ್ನನಾಯ್ಕರ ತನ್ನ ಸಾಕ್ಷ್ಯದಲ್ಲಿ ದಿಃ16.06.2022 ರಂದು ಪಿಎಸ್ಐ/ಚಾಸಾ-34 ರವರ ಆದೇಶದ ಮೇರೆಗೆ ಮೃತಳ ಶವದ ಬೆಂಗಾವಿಲಿಗಾಗಿ ನೇಮಿಸಿದ್ದು, ಬೆಂಗಾವಿಲಿನ ನಂತರ ಶವವನ್ನು ಬಾಗಲಕೋಟ ಜಿಲ್ಲಾ ಆಸ್ಪತ್ರೆಗೆ ಶವಪರೀಕ್ಷೆಗಾಗಿ ತೆಗೆದುಕೊಂಡು ಹೋಗಿದ್ದು, ಶವ ಪರೀಕ್ಷೆ ನಂತರ ಮೃತದೇಹವನ್ನು ಮೃತಳ ತಂದೆಗೆ ನೀಡಿ, ಈ ಬಗ್ಗೆ ಅವರಿಂದ ಸ್ವೀಕೃತಿಯನ್ನು ಪಡೆದುಕೊಂಡು, ಮೃತಳ ಮೈಮೇಲಿದ್ದ ಬಟ್ಟೆಗಳನ್ನು ವೈದ್ಯರಿಂದ ಪಡೆದುಕೊಂಡು ಚಾಸಾ-35 ರವರ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿ ವರದಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.27: ಫ್ರಾಸಾ-16 ಕೆ. ಹೊಸಕೇರೆಪ್ಪ ತನ್ನ ಸಾಕ್ಷ್ಯದಲ್ಲಿ ದಿಃ 15.06.2022 ರಂದು ರಾತ್ರಿ 10-30 ಗಂಟೆಗೆ ಈ ಪ್ರಕರಣದ ಪಿರ್ಯಾದಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಚಾಸಾ-34 ರವರು ಸ್ವೀಕರಿಸಿ ಠಾಣಾ ಗುನ್ನಾ ನಂ. 77/2022 ರಂತೆ ದಾಖಲ ಮಾಡಿಕೊಂಡು ಪ್ರಥಮ ವರ್ತಮಾನ ವರದಿ ಮತ್ತು ದೂರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.28: ಫ್ರಾಸಾ-16 ಕೆ. ಹೊಸಕೇರೆಪ್ಪ ತನ್ನ ಸಾಕ್ಷ್ಯದಲ್ಲಿ ಮಂದುವರೆದು ಅದೇ ದಿನ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-34 ರವರಿಂದ ಪಡೆದು ಕೃತ್ಯ ನಡೆದ ಸ್ಥಳಕ್ಕೆ ರಾತ್ರಿ 11-45 ಗಂಟೆಗೆ ಭೇಟಿ ನೀಡಿ, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ

ಶವ ಪಂಚನಾಮೆಯನ್ನು ಬೆಳಗಿನ ಜಾವ 00-15 ರಿಂದ 2-15 ಗಂಟೆಯವರೆಗೆ ಪಂಚರಾದ ಚಾಸಾ-2 ರಿಂದ 4 ರವರ ಸಮಕ್ಷಮ ಟಾರ್ಚನ ಹಾಗೂ ಎರಡು ಇಲಾಖಾ ಜೀಪ್ ಗಳ ಹೆಡ್ ಲೈಟ ಬೆಳಕಿನಲ್ಲಿ ಜರುಗಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.29: ಫ್ರಾಸಾ-16 ಕೆ. ಹೊಸಕೇರೆಪ್ಪ ತನ್ನ ಸಾಕ್ಷ್ಯದಲ್ಲಿ ಮಂದುವರೆದು ನಂತರ ಮೃತದೇಹವನ್ನು ಸಿಬ್ಬಂದಿ ಚಾಸಾ-23 ರವರ ಮುಖಾಂತರ ಬಾಗಲಕೋಟ ಜಿಲ್ಲಾ ಆಸ್ಪತ್ರೆಗೆ ಶವ ಪರೀಕ್ಷೆ ಕುರಿತು ಕಳುಹಿಸಿ, ಅದೇ ದಿನ ಬೆಳಗಿನ ಜಾವ 2-30 ರಿಂದ 4 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಈ ಮೇಲೆ ಹೇಳಿದಂತೆ ಬೆಳಕಿನ ವ್ಯವಸ್ಥೆ ಮಾಡಿಕೊಂಡು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಜರುಗಿಸಿ, ಘಟನಾ ಸ್ಥಳದಿಂದ ರಕ್ತ ಹತ್ತಿದ ಮಣ್ಣು, ಗುನ್ನೆ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಕಾಟನ್ ಸಹಾಯದಿಂದ ಸಂಗ್ರಹಿಸಿದ್ದು, ಅಲ್ಲಿ ಬಿದ್ದಿದ್ದ ಒಂದು ರಕ್ತ ಹತ್ತಿದ ಬೆಡಗ, ಮಾದರಿ ಮಣ್ಣು ಮತ್ತು ಮಾದರಿ ಹತ್ತಿ, ಕೇಸರಿ ಹಾಗೂ ಬಿಳಿ ಬಣ್ಣದ ಪಟ್ಟಿ ಪಟ್ಟಿ ಟಾವೆಲ್ ಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.30: ಫ್ರಾಸಾ-16 ಕೆ. ಹೊಸಕೇರೆಪ್ಪ ತನ್ನ ಸಾಕ್ಷ್ಯದಲ್ಲಿ ಮಂದುವರೆದು ನಂತರ ಆರೋಪಿತನಾದ ನಿನ್ನ ಪತ್ತೆ ಕುರಿತು ಸಿಬ್ಬಂದಿ ಚಾಸಾ-24 ಮತ್ತು 25 ರವರನ್ನು ನೇಮಕ ಮಾಡಿ ಜ್ಞಾಪನ ಪತ್ರ ನೀಡಿದ್ದಾಗಿ ಹಾಗೂ ಸಾಕ್ಷಿದಾರರಾದ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಹಾಗೂ ಅದೇ ದಿನ ಬೆಳಿಗ್ಗೆ 10-35 ಗಂಟೆಗೆ ಚಾಸಾ-24 ಮತ್ತು 25 ರವರು ಆರೋಪಿತನಾದ ನಿನ್ನನ್ನು ಪತ್ತೆ ಮಾಡಿ

ವರದಿಗಳೊಂದಿಗೆ ಹಾಜರುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.31: ಫ್ರಾಸಾ-16 ಕೆ. ಹೊಸಕೇರಪ್ಪ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿತನಾದ ನಿನ್ನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ನಿನ್ನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು ರಿಮಾಂಡ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾಗಿ ಹಾಗೂ ಅದೇ ದಿನ ಮಧ್ಯಾಹ್ನ 4 ಗಂಟೆಗೆ ಸಿಬ್ಬಂದಿ ಚಾಸಾ-23 ರವರು ಮೃತಳ ಮೈಮೇಲಿದ್ದ ಬಟ್ಟೆಗಳನ್ನು ಹಾಗೂ ಒಂದು ಹಗ್ಗವನ್ನು ತಮ್ಮ ವರದಿಯೊಂದಿಗೆ ಹಾಜರುಪಡಿಸಿದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.32: ಫ್ರಾಸಾ-16 ಕೆ. ಹೊಸಕೇರಪ್ಪ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಶವ ಪಂಚನಾಮೆ ಹಾಗೂ ಸ್ಥಳ ಪಂಚನಾಮೆ ಕಾಲಕ್ಕೆ ವಿಶೇಷವಾಗಿ ಬೆಳಕಿನ ವ್ಯವಸ್ಥೆ ಮಾಡಿಕೊಟ್ಟ ಚಾಸಾ-28 ಮತ್ತು ಚಾಸಾ-29 ರವರು ನೀಡಿದ ವರದಿಯನ್ನು, ಮೃತಳ ಹಾಗೂ ಆರೋಪಿತನಾದ ನಿನ್ನ ಆಧಾರ ಕಾರ್ಡಗಳನ್ನು, ಕೃತ್ಯ ನಡೆದ ಸ್ಥಳದ ಪಹಣಿ ಪತ್ರಿಕೆಯನ್ನು ಹಾಗೂ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡುವಂತೆ ಲೋಕೋಪಯೋಗಿ ಇಲಾಖೆ ಹುನಗುಂದ ರವರಿಗೆ ಪತ್ರ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.33: ಫ್ರಾಸಾ-16 ಕೆ. ಹೊಸಕೇರಪ್ಪ ತನ್ನ ಸಾಕ್ಷ್ಯದಲ್ಲಿ ಮುಂದುವರೆದು ದಿಃ 28.06.2022 ರಂದು ಮೃತ ಸಾವಿತ್ರಿ ರವರ ಮರಣೋತ್ತರ ಪರೀಕ್ಷಾ ವರದಿ ಹಾಗೂ ಮೃತಳ

ರಕ್ತದ ಗುಂಪಿನ ಪರೀಕ್ಷಾ ವರದಿಯನ್ನು ಬಾಗಲಕೋಟ ಜಿಲ್ಲಾ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಪಸಿಕೊಂಡಿದ್ದಾಗಿ, ದಿಃ 29.06.2022 ರಂದು ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮು ಮಾಲು-1 ರಿಂದ 11 ವಸ್ತುಗಳನ್ನು ಎಫ ಎಸ್ ಎಲ್ ಪರೀಕ್ಷೆ ಗಾಗಿ ಸಿಬ್ಬಂದಿ ಚಾಸಾ-26 ರವರ ಮೂಲಕ ಎಫ್ ಎಸ್ ಎಲ್ ಬೆಳಗಾವಿ ರವರಿಗೆ ಕಳುಹಿಸಿಕೊಟ್ಟಿರುತ್ತೇನೆ ಹಾಗೂ ದಿಃ 22.07.2022 ರಂದು ವರ್ಗಾವಣೆ ಆಗಿದ್ದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-36 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?

ಉತ್ತರ : ಸುಳ್ಳು

ಪ್ರಶ್ನೆ ನಂ.34 : ಫ್ರಾಸಾ-17 ಸುರೇಶ ಬಂಡೆಗುಂಬಳ ತನ್ನ ಸಾಕ್ಷ್ಯದಲ್ಲಿ ದಿಃ 26.07.2022 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-35 ರವರಿಂದ ಪಡೆದುಕೊಂಡಿದ್ದು, ದಿಃ 27.07.2022 ರಂದು ಲೋಕೋಪಯೋಗಿ ಇಲಾಖೆಯಿಂದ ಘಟನಾ ಸ್ಥಳದ ನಕ್ಷೆ ಬಂದಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಪಸಿಕೊಂಡಿರುತ್ತೇನೆ ಹಾಗೂ ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಮೇಲ್ನೋಟಕ್ಕೆ ಆರೋಪಿತನಾದ ನಿನ್ನ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಎಫ್.ಎಸ್.ಎಲ್ ವರದಿ ಬರುವದು ಬಾಕಿ ಇಟ್ಟು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀನೇನು ಹೇಳುತ್ತಿ?.

ಉತ್ತರ : ಸುಳ್ಳು

ಪ್ರಶ್ನೆ ನಂ.35 : ಈ ಮೊಕದ್ದಮೆ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೆ?

ಉತ್ತರ : ಇಲ್ಲ

ಪ್ರಶ್ನೆ ನಂ.36 : ನಿಮ್ಮ ಪರ ಯಾವುದೇ ಸಾಕ್ಷ್ಯದಾಖಲೆ ಇದೆಯೆ?

ಉತ್ತರ : ಇಲ್ಲ

(ಮೇಲ್ಕಂಡ ಹೇಳಿಕೆಯನ್ನು ದಿನಾಂಕಃ 08-02-2024 ರಂದು ಆರೋಪಿಗೆ ಓದಿ ಹೇಳಲಾಯಿತು ಅವರು ಉತ್ತರಿಸಿದಂತೆ ದಾಖಲಿಸಿಕೊಳ್ಳಲಾಗಿದೆ ಎಂದು ದೃಡೀಕರಿಸಿಕೊಂಡಿದ್ದೇನೆ)

ಸಹಿ/-

(ಎನ್. ವಿ. ವಿಜಯ್)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.